ಸಾವಿರ ರೂಪಾಯಿಗಳ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು ಸರಿಯೇ? ಬಿಜಾಪುರದ ಸಾರಿಗೆ ವಿಭಾಗ ಕಳೆದ ೨೫ ವರ್ಷಗಳಿಂದ ಲಾಭ ಮಾಡುತ್ತಿದೆ. ಲಾಭದಲ್ಲಿ ಅದು ಒಂದನೇ ಸ್ಥಾನದಲ್ಲಿದೆ. ಅದೇ ನಷ್ಟದಲ್ಲಿರುವ ವಿಭಾಗಗಳಲ್ಲಿ ಒಳ್ಳೆಯ ಸುಸಜ್ಜಿತವಾದ ಬಸ್‌ನಿಲ್ದಾಣಗಳನ್ನು ಕಟ್ಟಿಸುವಾಗ ಇಲ್ಲಿ ಕೇವಲ ೫೦ ಸಾವಿರ ರೂ. ಗಳನ್ನು ಖರ್ಚು ಮಾಡುವುದು ಸರಿಯೇ? ಅದೇ ಕಲಾಬುಗಿಯಲ್ಲಿ ೮೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸುಸಜ್ಜಿತವಾದ ಬಸ್ ನಿಲ್ದಾಣ ಕಟ್ಟಿರುವಂತೆ ಇಲ್ಲಿ ಸಹ ಕಟ್ಟಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—೮೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಬೇಕೆಂಬುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಅದೇ ರೀತಿ ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಬಾಬುರೆಡ್ಡಿ ವಿ.ತಂಗಳ್.- ಈಗ ಬೇರೆ ಕಡೆಗಳಲ್ಲಿ ಬಸ್‌ನಿಲ್ದಾಣಕ್ಕೆ ಜಾಗ ಪಡೆದುಕೊಳ್ಳಲು ೧೦-೨೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಆದರೆ ಸಾವಳಗಿಯಲ್ಲಿ ಬಸ್‌ನಿಲ್ದಾಣಕ್ಕೆ ಬೇಕಾದ ಒಳ್ಳೆಯ ಜಾಗವನ್ನು ಕೇವಲ ೮೦೦ ರೂಪಾಯಿಗಳಿಗೆ ಒದಗಿಸಿಕೊಡಲಾಗಿದೆ. ಆದ್ದರಿಂದ ಅಲ್ಲಿ ಒಂದು ಸುಸಜ್ಜಿತವಾದಂಥ ಬಸ್ ನಿಲ್ದಾಣವನ್ನು ಕಟ್ಟಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಅವರ ಅಭಿಪ್ರಾಯದಂತೆ ಕಟ್ಟಿಸಲು ನಾವು ಒಪ್ಪಿಕೊಂಡಿದ್ದೇವ.

ಪ್ರಶ್ನೆ:೭೧೪:(ಸದಸ್ಯರು ಹಾಜರಿಲ್ಲ)

ಮದ್ಯಸಾರ ಅಂಗಡಿಗಳಿಗಾಗಿ ನೀಡಲಾದ ಪರವಾನಿಗೆಗಳು

ಳಳಖಿ ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮದ್ಯದ ಅಂಗಡಿಗಳಿಗೆ ಪರವಾನಿಗೆಯನ್ನು ಕೊಡಲಾಗಿದೆ.

ಆ) ಅವುಗಳಲ್ಲಿ ಪಟ್ಟಣದಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಮದ್ಯದ ಅಂಗಡಿಗಳೆಷ್ಟು (ಪ್ರತ್ಯೇಕವಾದ ಅಂಕಿ ಅಂಶಗಳನ್ನು ಕೊಡುವುದು.)

ಇ) ಲೈಸನ್ಸ್ ಫೀಯಿಂದ ಬಂದ ಹಣವೆಷ್ಟು.

ಈ) ಮದ್ಯದ ಅಂಗಡಿಗಳಲ್ಲಿ ತೆರಿಗೆ ಕೊಡದೆ ಇರುವಂತಹ ಮದ್ಯವನ್ನು ಮಾರಾಟ ಮಾಡುತ್ತಿರುವುದು ನಿಜವೇ.

ಉ) ಹಾಗಿದ್ದಲ್ಲಿ ಅಂತಹ ಮಾರಾಟ ಮಾಡುವವರ ಮೇಲೆ ಸರ್ಕಾರ ಯಾವ ಕ್ರಮವನ್ನ ತೆಗೆದುಕೊಂಡಿದೆ. ತೆಗೆದುಕೊಳ್ಳಲು ಯೋಚಿಸುತ್ತಿದೆಯೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಅಬಕಾರಿ ಸಚಿವರು) —

ಅ) ೧೯೮೪-೮೫ – ೨೪೨೫
೧೯೮೫-೮೬ – ೨೯೩೦
೧೯೮೬-೮೭ – ೩೦೮೭

ಆ)

	ಪಟ್ಟಣ	ಗ್ರಾಮಾಂತರ ಸ್ಥಳಗಳು
೧೯೮೪-೮೫	೧೧೪೦	೧೬೮೫
೧೯೮೫-೮೬	೧೧೯೦	೧೭೩೯
೧೯೮೬-೮೭	೧೨೦೭	೧೮೭೦

ಇ) ೧೯೮೪-೮೫ ೩.೨೭ ಕೋಟಿಗಳು.
೧೯೮೫-೮೬ ೩.೪೦ ಕೋಟಿಗಳು.
೧೯೮೬-೮೭ ೪.೩೨ ಕೋಟಿಗಳು.

ಈ) ಹೌದು.

ಉ) ಇಂತಹ ಮಂದ್ಯದ ಅಂಗಡಿಗಳ ಪರವಾನಗಿ ಮತ್ತು ತೆರಿಗೆ ಕೊಡದ ಮಾಲೀಕನನ್ನು ಸರಬರಾಜು ಮಾಡುವ ಡಿಸ್ಟಿಲರಿಗಳ ಪರವಾನಗಿಯನ್ನು ರದ್ದು ಪಡಿಸುವಂತೆ ಉಗ್ರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮೊದಲನೇ ಪ್ರಶ್ನೆಗೆ ೧೯೮೬-೮೭ರಲ್ಲಿ ೩೦೮೭ ಮದ್ಯ ಮಾರಾಟಕ್ಕಂಥ ಅಂಗಡಿಗಳಿವೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಸಾರಾಯಿ ಸೇಂದಿ ಏನೂ ಮಾರುತ್ತಾರೆ ಅವು ಸಹ ಇದರಲ್ಲಿ ಸೇರಿವೆಯೇ ಎನ್ನುವುದನ್ನು ತಿಳಿಸಬೇಕು ? ಎರಡನೆಯದು ಲೈಸನ್ಸ್ ಫೀಯಿಂದ ಬಂದ ಹಣವೆಷ್ಟು ಎಂದು ಕೇಳಿದ್ದಕ್ಕೆ ೪.೩೨ ಕೋಟಿಗಳು ಎಂದೂ ಹೇಳಿದ್ದಾರೆ ಇದನ್ನು ಮಾರಿದ್ದರಿಂದ ಟ್ಯಾಕ್ಸ್ ಕಲೆಕ್ಷನ್ ಎಷ್ಟಾಗುತ್ತದೆ. ಆಮೇಲೆ ಮೂರನೆಯದಾಗಿ, ಕರ ಇಲ್ಲದೆ ಅಂಗಡಿಗಳಲ್ಲಿ ಬ್ರಾಂದಿ, ವಿಸ್ಕಿ ಮುಂತಾದ ಮದ್ಯದ ಸಾಮಾನುಗಳನ್ನು ವ್ಯಾಪಾರ ಮಾಡುತ್ತಿರುವುದು ನಿಜವೇ ಎಂದು ಕೇಳಿದ್ದಕ್ಕೆ ಹೌದು ಎಂದೂ ಒಪ್ಪಿದ್ದೀರಿ. ಹಿಂದಿನ ಕಾಲದಿಂದಲೂ ಒಂದು ಪದ್ಧತಿ ಇದೆ. ಕರ ಇಲ್ಲದೆ ಸಾರಾಯಿ, ಬ್ರಾಂದಿ ಮುಂತಾದುವುಗಳನ್ನು ತಯಾರು ಮಾಡತಕ್ಕಂಥವರು ಯಾರಿದ್ದಾರೆ ಅವರು ಚುನಾವಣಾ ಕಾಲದಲ್ಲಿ ಪಕ್ಷಗಳಿಗೆ ಕೊಡುತ್ತಿದ್ದರು...

ಅಧ್ಯಕ್ಷರು.—ಡಿಸ್ಕಷನ್ ಬೇಡ, ಉಪ ಪ್ರಶ್ನೆಯನ್ನು ನೇರವಾಗಿ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಈಗಲೂ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನು ಮದ್ಯ ತಯಾರು ಮಾಡುತ್ತಿದ್ದಾರೆ, ಅಂತಹವರು ನಿಮಗೆ ಚುನಾವಣೆಯ ಖರ್ಚಿಗೆ ಹಣ ಮಾಡುತ್ತಿದ್ದಾರೆಯೇ ಹೇಗೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ — ಮಾನ್ಯ ಅಧ್ಯಕ್ಷರೆ, ನಾನು ಏನೂ ಪಟ್ಟಿಯನ್ನು ಕೊಟ್ಟಿದ್ದೇನೆಯೋ ಅದರಲ್ಲಿ ಸಾರಾಯಿ ಮಂತ್ತು ಹೆಂಡದ ಅಂಗಡಿಗಳು ಸೇರುವುದಿಲ್ಲ. ಎರಡನೆಯದಾಗಿ ಕರ ಎಷ್ಟು ಬಂದಿದೆ ಎಂದು ಮಾನ್ಯ ಬಸವಲಿಂಗಪ್ಪನವರು ಕೇಳಿದ್ದಾರೆ. ಇದರ ಮಾಹಿತಿ ಇಲ್ಲಿ ಇಲ್ಲ. ಬರೀ ಲೈಸನ್ಸ್‌ಫೀಗೆ ಸಂಬಂಧಪಟ್ಟ ಮಾಹಿತಿ ಕೇಳಿದ್ದರು, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಆಮೇಲೆ ತೆರಿಗೆ ಕೊಡದೆ ಮದ್ಯವನ್ನು ಮಾರಾಟ ಮಾಡುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದೂ ಕೇಳಿದ್ದಾರೆ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗ ದಂಡ ವಸೂಲು ಮಾಡುತ್ತಿದ್ದರು, ಈಗ ಅವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡತಕ್ಕಂಥ ಉಗ್ರ ಕ್ರಮವನ್ನು ತೆಗೆದುಕೊಳ್ಳಲಾಗುವುದೂ ಎಂದು ಹೇಳಿದ್ದೇನೆ. ಅಂತಹ ಡಿಸ್ಟಲರಿಗಳವರ ಲೈಸನ್ಸ್‌ನ್ನು ರದ್ದು ಮಾಡತಕ್ಕಂಥ ಕ್ರಮವನ್ನು ತೆಗೆದು ಕೊಳ್ಳುವುದೂ ಸರ್ಕಾರದ ಹೊಸ ನೀತಿ ಆಗಿದೆ. ಕರ ಕೊಡದೆ ವ್ಯಾಪಾರ ಮಾಡುವವರ ಮೇಲೆ ಇಂತಹ ಉಗ್ರ ಕ್ರಮ ತೆಗೆದುಕೊಳ್ಳುವುದು ನಮ್ಮ ಹೊಸ ನೀತಿಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷ ಈ ಪದ್ಧತಿಯನ್ನು ಜಾರಿಗೆ ಕೊಡುತ್ತೀರಾ, ಹಳೇ ಪದ್ಧತಿಯನ್ನು ಅಂದರೆ ದಂಡ ವಸೂಲುಮಾಡುವುದನ್ನು ರದ್ದು ಮಾಡಿದ್ದೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಪಂಗೆ ಈಗಾಗಲೇ ತಿಳಿಸಿದ್ದೇನೆ. ಮಾಡಲು ದಂಡ ವಸೂಲು ಮಾಡುತ್ತಿದ್ದರು, ಈಗ ಅವರ ಪರವಾನಗಿಯನ್ನು ರದ್ದು ಮಾಡುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಮಂಮದಾಪುರ ಆರೋಗ್ಯ ಕೇಂದ್ರದ ಪುನರ್ನಿರ್ಮಾಣ

೯೭೪ ಶ್ರೀ ಕೆ. ಎಚ್. ಪಾಟೀಲ್ (ಬಸವನ ಬಾಗೇವಾಡಿ).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೇ ?

ಅ) ವಿಜಾಪುರ ತಾಲ್ಲೂಕು ಮಮದಾಪುರ ಗ್ರಾಮದಲ್ಲಿ ಒಂದು ಆರೋಗ್ಯ ಘಟಕವಿದ್ದು ಅದರ ಕಟ್ಟಡದ ಮೇಲ್ಛಾವಣಿ ಕುಸಿದಿದ್ದುದು ನಿಜವೇ ?